ಸಾಕ್ಷಿಯನ್ನು ದಿಃ**04.02.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಎಸ್.ಎಮ್ ವಕೀಲರಿಂದಃ–**

ನಾನು, ವಾದಿ, ಸಹೋದರಿಯರು ಮತ್ತು ಸಹೋದರರು ಯಾವಾಗ ಭಾಗ ಮಾಡಿಕೊಂಡಿದ್ದೀರಿ ಎಂದರೆ 2009 ರಲ್ಲಿ ನಾನು ಮತ್ತು ನನ್ನ ಸಹೋದರರು ಭಾಗ ಮಾಡಿಕೊಂಡಿದ್ದೇವೆ. ವಾದಿಹಾಗೂ ನನ್ನ ಉಳಿದ ಸಹೋದರಿಯರು ಸದರಿ ಭಾಗಕ್ಕೆ ಸೇರಿಲ್ಲ. ಆ ರೀತಿ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ. ಯಾವುದೇ ಪಂಚಾಯಿತಿದಾರರು ಸೇರಿಲ್ಲ. ನನ್ನ ಸಹೋದರರಾದ 3 ರಿಂದ 5ನೇ ಪ್ರತಿವಾದಿರವರಿಗೆ ಸ.ನಂ.26/2 ರಲ್ಲಿ ಹಿಸ್ಸೆ ಆಗಿದೆ. ಸ.ನಂ.141/1, 141/3 ಮತ್ತು 141/4 ಹಾಗೂ ಸ.ನಂ.42/ಪಿ28 ರಲ್ಲಿ ಎರಡು ಎಕರೆಯನ್ನು ನಾನು ಹಾಗೂ 4, 5 ಮತ್ತು 8ನೇ ಪ್ರತಿವಾದಿಗಳು ಭಾಗ ಮಾಡಿಕೊಂಡಿದ್ದೇವೆ. ಸ.ನಂ.42/ಪಿ28 ಕ್ಕೆ ಸಂಬಂಧಿಸಿದಂತೆ ದಾಖಲೆ ನಮ್ಮ ಹೆಸರಿಗೆ ಆಗಿಲ್ಲ ತಂದೆಯ ಹೆಸರಿನಲ್ಲಿ ಮುಂದುವರೆದಿದೆ. ಸ.ನಂ.513 ರಲ್ಲಿ 1 ಎಕರೆಯಲ್ಲಿ ನನ್ನ ತಾಯಿ ನನಗೆ ಗೊತ್ತಿಲ್ಲದಂತೆ 8ನೇ ಪ್ರತಿವಾದಿಯ ಮಗಳಾದ ರಕ್ಷಿತಾಳಿಗೆ ಮೃತ್ಯ ಪತ್ರ ಬರೆದುಕೊಟ್ಟಿದ್ದಾರೆ. ಸದರಿ ಸ.ನಂ.513 ನನ್ನ ತಾಯಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ ಅದು ಅವರ ಸರ್ಯಾಜಿತವಾಗಿದೆ.

ಸ.ನಂ.513 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಯೆಂದು ನಾನು ಬರೆಸಿಲ್ಲ. ನಿಡಿ–7 ರೇಶನ್ ಕಾರ್ಡನ್ನು ನಾನು ಹಾಜರುಪಡಿಸಿಲ್ಲ. ನಿಡಿ–1 ರಿಂದ 21 ರ ದಾಖಲೆಗಳನ್ನು ನಾನು ಹಾಜರುಡಿಪಸಿಲ್ಲ. 2021 ರವರೆಗೂ ನಾನು ಈ ದಾವೆಯಲ್ಲಿ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ ಎಂದರೆ ಇಲ್ಲ. 2021 ಜೂನ್ ತಿಂಗಳಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. 2019 ರಲ್ಲಿ ನನ್ನ ತಾಯಿ ತೀರಿಕೊಂಡಿರುತ್ತಾರೆ. ಮೇಲೆ ಹೇಳಿದ ಭಾಗ ಮಾಡಿಕೊಂಡಿದ್ದೇವೆನ್ನುವ ಆಸ್ತಿಗಳಲ್ಲಿ ವಾದಿಗೆ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿ 11 ರಿಂದ 13 ರವರ ಪರವಾಗಿಯೂ ನಾನು ಸಾಕ್ಷಿ ಹೇಳುತ್ತಿದ್ದೇನೆ. ಸಾಕ್ಷಿ ಹೇಳಿ ಎಂದು ಅವರು ನನಗೆ ದಾಖಲೆ ಬರೆದುಕೊಟ್ಟಿಲ್ಲ. ನಾನು ಜಮೀನು ಮಾರಾಟ ಮಾಡಿದ್ದರಿಂದ ಅವರ ಪರವಾಗಿಯೂ ಸಾಕ್ಷಿ ಹೇಳುತ್ತಿದ್ದೇನೆ. 11 ರಿಂದ 13 ನೇ ಪ್ರತಿವಾದಿಗಳು ಯಾವ ದಾಖಲೆಯ ಆಧಾರದ ಮೇಲೆ ಕಾನೂನು ಬದ್ಧ ಮಾಲೀಕರು ಎಂದು ಹೇಳುತ್ತಿದ್ದೀರಿ ಎಂದರೆ ನೊಂದಾಯಿತ ಪತ್ರ ಬರೆದುಕೊಟ್ಟಿದ್ದರಿಂದ ಹೇಳುತ್ತಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರಾಗಲು ಪ್ರಾರಂಬಿಸಿದ ನಂತರ 2021 ರಲ್ಲಿ ಪತ್ರ ಬರೆದುಕೊಟ್ಟಿದ್ದೇನೆ. ದಾವಾ ಚಾಲ್ತಿಯಲ್ಲಿದ್ದಾಗ ಪತ್ರ

ಬರೆದುಕೊಟ್ಟಿದ್ದೇನೆಂದರೆ ಸರಿ. ಸೃಷ್ಟಿ ಮಾಡಿಕೊಂಡು ಬರೆದುಕೊಟ್ಟಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿ ಪಿತ್ರಾರ್ಜಿತ ಎಂದು ಗೊತ್ತಿದ್ದರೂ ಕೂಡ ಪತ್ರ ಬರೆದುಕೊಟ್ಟಿದ್ದೇನೆಂದರೆ ಸರಿಯಲ್ಲ. ದಿಃ16.12.2021 ರಂದು ಸ.ನಂ.141/3 ರಲ್ಲಿ 24 ಗುಂಟೆ ಜಮೀನನ್ನು ದಾಖಲೆ ಸೃಷ್ಟಿಸಿ ನನ್ನ ಪತ್ನಿಯಾದ 15 ಪ್ರತಿವಾದಿಗೆ ದಾನ ಪತ್ರ ಮಾಡಿಕೊಟ್ಟಿದ್ದೇನೆಂದರೆ ಸರಿಯಲ್ಲ. ದಿಃ16.12.2021 ರಂದು ಸ.ನಂ.26/2 ರಲ್ಲಿ 30 ಗುಂಟೆಯನ್ನು 5ನೇ ಪ್ರತಿವಾದಿಯು ಅವರ ಪತ್ನಿಯಾದ 14ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆಂದರೆ ಸರಿ. ನಾನು ಮತ್ತು 5ನೇ ಪ್ರತಿವಾದಿ ಇಬ್ಬರು ಸೇರಿ ಒಂದೇ ದಿನ ಸದರಿ ದಾಖಲೆಗಳನ್ನು ಸೃಷಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ದಾಖಲೆಗಳನ್ನು ಸೃಷಿ ಮಾಡಿದರೆ ವಾದಿಯವರಿಗೆ ಹಕ್ಕು ಬರುವುದಿಲ್ಲ ಎಂಬ ಕಾರಣಕ್ಕಾಗಿ ದಾಖಲೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ದಾವೆಯನ್ನು ಮುಂದೂಡುವ ಸಲುವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಸ.ನಂ. 26/2, 513/9 ಮತ್ತು 141/4 ರಲ್ಲಿ ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿ ನನ್ನ ತಂದೆಯ ಹೆಸರನಲ್ಲಿ ಜಮೀನುಗಳು ಇದ್ದವು. ಯಾವ ಜಮೀನುಗಳು ಎಂದರೆ ಸ.ನಂ.141/1 ರಲ್ಲಿ 2 ಎಕರೆ 3 ಗುಂಟೆ ಹಾಗೂ ಸ.ನಂ.141/3 ರಲ್ಲಿ 1 ಎಕರೆ 4 ಗುಂಟೆ ತಂದೆಯ ಹೆಸರಿನಲ್ಲಿ ಇತ್ತು. ಸ.ನಂ.141/1 ರಲ್ಲಿ 2 ಎಕರೆ 3 ಗುಂಟೆ ಹಾಗೂ ಸ.ನಂ.141/3 ರಲ್ಲಿ 1 ಎಕರೆ 4 ಗುಂಟೆ ಮೇಲೆ ಹೇಳಿದ ಜಮೀನುಗಳನ್ನು ಖರೀದಿಸುವ ಪೂರ್ವದಲ್ಲಿ ನನ್ನ ತಂದೆಯ ಹೆಸರಿನಲ್ಲಿತ್ತು. ಸದರಿ ಜಮೀನು ನನ್ನ ತಂದೆಗೆ ಕ್ರಯದ ಮೂಲಕ ಬಂದಿತ್ತು. ಸದರಿ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದೇನೆ. ಸ.ನಂ.20/4 ರಲ್ಲಿರುವ 4 ಗುಂಟೆ ಜಮೀನಿನಲ್ಲಿ ನಾನು, 4, 5 ಮತ್ತು 8ನೇ ಪ್ರತಿವಾಗಳು ವಾಸದ ಮನೆಗಳನ್ನು ಕಟ್ಟಿಕೊಂಡಿದ್ದೇವೆ. ಸಾಕ್ಷಿ ಮುಂದುವರೆದು 8ನೇ ಪ್ರತಿವಾದಿಯ ಹೆಸರಿನಲ್ಲಿರುವ 3 ಗುಂಟೆಯನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.ವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆ ಹೋಗುತ್ತದೆಂದು ಖಚಿತವಾದ ನಂತರ ನಾವು ಈ ದಾವೆಯಲ್ಲಿ ಹಾಜರಾಗಿದ್ದೇವೆ ಎಂದರೆ ಸರಿಯಲ್ಲ. ಮೊದಲು ನನ್ನ ತಂದೆ ದಾವೆ ನಡೆಸುತ್ತಿದ್ದರು. ಪ್ರತಿವಾದ ಪತ್ರದಲ್ಲಿ ಆ ಬಗ್ಗೆ ಬರೆಸಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ತಿಳಿದಿದ್ದರು ರು ಸಹ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ.

ವಾದಿಗೆ ದಾವಾ ಆಸ್ತಿಗಳಲ್ಲಿ 1/7 ಹಿಸ್ಸೆ ಹಕ್ಕು ಇದೆ ಎಂದರೆ ಅದು ನ್ಯಾಯಾಲಯಕ್ಕೆ ಬಿಟ್ಟಿದೆ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.